

## ಈಶ್ವರಚಂದ್ರ

ವಿಮಾನ ನೆಲಬಿಟ್ಟು ಮೇಲಕ್ಕೆ ಚಿಮ್ಮುತ್ತಿದ್ದಂತೆಯೇ ರವಿ ಸಮಾಧಾನದ ನಿಟ್ಟುಸಿರುಬಿಟ್ಟ. ಎಲ್ಲ ಯೋಜನೆಯಂತೆ ಯಶಸ್ವಿಯಾಗಿ ನಡೆದಿದೆ. ಈ ವೇಳೆಗಾಗಲೇ ಪ್ರಕ್ರಿಯೆ ಆರಂಭವಾಗಿರಬೇಕು. ಕೊಲೆ ಎಂದು ಗೊತ್ತಾಗದಂತಹ ಒಂದು ಪರಿಪೂರ್ಣ ಕೊಲೆಯನ್ನು ಸಾಧಿಸುತ್ತಿರುವುದಕ್ಕೆ ಅವನೇ ಬೆನ್ನು ತಟ್ಟಿಕೊಂಡ. ಸ್ವಲ್ಪವೂ ಸುಳಿವು ಸಿಗಬಾರದು ಮತ್ತು ಉದ್ದೇಶ ಏನು ಎಂದು ಯಾರಿಗೂ ಗೊತ್ತಾಗಬಾರದು ಎನ್ನುವ ಎರಡು ವಿಷಯಗಳಿಗೆ ಅವನು ಹೆಚ್ಚಿನ ಗಮನಕೊಟ್ಟಿದ್ದ. ಅಲ್ಲದೆ ಅದು ನಡೆಯುವ ಸಮಯದಲ್ಲಿ ತಾನು ದೂರದಲ್ಲೆಲ್ಲೋ ಇರುವುದಕ್ಕೆ ಬಲವಾದ ಸಾಕ್ಷ್ಯ ಇರಬೇಕು. ಅದನ್ನೆಲ್ಲ ನೆನೆದಾಗ ಅವನಿಗೇ ನಗು ಬಂತು. ಮೊದಲಿನಿಂದ ಪತ್ತೆದಾರಿ ಸಾಹಿತ್ಯವನ್ನು ವಿಪರೀತ ಆಸಕ್ತಿಯಿಂದ ಓದುತ್ತಿದ್ದ ರವಿ ಪತ್ರಿಕೆಗಳಲ್ಲಿ ಬರುವ ಅಪರಾಧ ಕೃತ್ಯಗಳನ್ನು ತಪ್ಪದೇ ಓದುತ್ತಿದ್ದ. ಅಪರಾಧ ನಡೆದ ಕೆಲವೇ ಗಂಟೆಗಳಲ್ಲಿ ಅಪರಾಧಿಗಳನ್ನು ಹಿಡಿಯುತ್ತಿದ್ದ ಪೊಲೀಸರನ್ನು ಶ್ಲಾಘಿಸುವ ಬದಲು, ಅಪರಾಧಿಗಳ ಪೆದ್ದುತನಕ್ಕೆ ನಗುತ್ತಿದ್ದ. ಈಚೆಗೆ ಮೊಬೈಲ್ ಮತ್ತು ಸಿಸಿಟೀವಿ ಕ್ಯಾಮರಾಗಳಿಂದ ಎಷ್ಟೋ ಅಪರಾಧಗಳು ಶೀಘ್ರವಾಗಿ ಪತ್ತೆಯಾಗುತ್ತಿರುವುದನ್ನು ನೋಡಿದಾಗ ಅವನ್ನು ನಿವಾರಿಸಿಕೊಳ್ಳದೆ ಕೃತ್ಯಕ್ಕಿಳಿಯುವವರು ಎಂತಹ ಕಸುಬುದಾರರು ಎಂದು ಹೀಯಾಳಿಸುತ್ತಿದ್ದ. ಅದಕ್ಕಾಗಿಯೇ ಒಂದು ಪರಿಪೂರ್ಣ ಕೊಲೆ ಮಾಡುವ ಯೋಜನೆಗೆ ಅವನು ಕೈ ಹಾಕಿದ್ದ.

ಕೊಲೆ ಮಾಡಲು, ಪಾರ್ಕಿನಲ್ಲಿ ಮರದ ಕೆಳಗೆ ಯಾವಾಗಲೂ ಭಿಕ್ಷೆ ಬೇಡುತ್ತಾ ಕುಳಿತಿರುವ ಒಬ್ಬ ಮುದಿ ಭಿಕ್ಷುಕನನ್ನು ಅವನು ಆರಿಸಿಕೊಂಡ. ಅವನು ಸತ್ತರೆ ಯಾರೂ ಕೇಳುವವರಿಲ್ಲ, ಯಾರಿಗೂ ನಷ್ಟವಿಲ್ಲ. ಅವನಿಗೆ ಮುಕ್ತಿ ದೊರಕಿದಂತೆ. ಕೊಲೆ ಮಾಡಲು ಆರಿಸಿಕೊಂಡ ವಿಧಾನ: ನಿದ್ರಾ ಮಾತ್ರೆಗಳು ಮಾವಿನಹಣ್ಣಿನ ರಸದ ಅರ್ಧ ಲೀಟರ್ ಬಾಟಲಿಯಲ್ಲಿ ಬೇರೆ ಬೇರೆ ಔಷಧದ ಅಂಗಡಿಗಳಿಂದ ಸಂಗ್ರಹಿಸಿದ ಸುಮಾರು ಇಪ್ಪತ್ತು ಮಾತ್ರೆಗಳನ್ನು ಕರಗಿಸಿ ಪಾರ್ಕಿನಲ್ಲಿ ಆ ಭಿಕ್ಷುಕನ ಸಮೀಪದ ಕಲ್ಲುಬೆಂಚಿನ ಮೇಲೆ ಕುಳಿತು, ಆ ಮೇಲೆ ಅದನ್ನು ಅಲ್ಲಿಯೇ ಮರೆತುಬಿಟ್ಟು ಹೋಗುವುದು. ಅವನು ಅದನ್ನು ತೆಗೆದುಕೊಂಡು ಕುಡಿಯುತ್ತಾನೆ. ಸ್ವಲ್ಪ ಹೊತ್ತಿಗೆಲ್ಲ ನಿದ್ರೆ ಆವರಿಸುತ್ತದೆ. ಆಮೇಲೆ ಏಳುವುದಿಲ್ಲ. ಮರುದಿನ ಬೆಳಗ್ಗೆ ಯಾರಾದರೂ ಅವನನ್ನು ಗಮನಿಸಬಹುದು. ಕುಡಿದು ಬಿದ್ದಿರಬೇಕು ಎಂದು ಅಲಕ್ಷಿಸಬಹುದು. ಆಮೇಲೆ ಗೊತ್ತಾಗುತ್ತದೆ. ನಗರಸಭೆಯವರು ಬಂದು ಹೆಣ ಸಾಗಿಸುತ್ತಾರೆ. ಪತ್ರಿಕೆಯಲ್ಲಿ ಒಂದು ಸಾಲು ಸುದ್ದಿ ಪ್ರಕಟವಾಗುತ್ತದೆ: 'ಪಾರ್ಕಿನಲ್ಲಿ ಚಳಿಯಿಂದ ಅನಾಥ ಭಿಕ್ಷುಕನ ಸಾವು' ಅಲ್ಲಿಗೆ ಎಲ್ಲ ಮುಗಿಯುತ್ತದೆ.

★★★

ಇತ್ತ ಭಿಕ್ಷುಕ ತಲೆ ಎತ್ತಿ ನೋಡಿದ. ಹತ್ತಿರದ ಕಲ್ಲುಬೆಂಚಿನ ಮೇಲೆ ಒಂದು ಬಾಟಲು. ಸ್ವಲ್ಪ ಹೊತ್ತಿನ ಹಿಂದೆ ಯಾರೋ ಒಬ್ಬರು ಕೂತು ಅಲ್ಲಿ ಪತ್ರಿಕೆ ಓದುತ್ತಿದ್ದರು. ಮರೆತುಹೋದರೇನೋ, ಮರಳಿ ಬರಬಹುದು ಎಂದು ಒಂದು ನಿಮಿಷ ಕಾದ. ಯಾರೂ ಬರಲಿಲ್ಲ. ಮೆಲ್ಲನೆ ಮೇಲೆದ್ದು ಆ